## ಬೆನ್ನುಹುರಿ ನೋವಿಗೆ ಹೊಸ ಚಿಕಿತ್ಸೆ!

ಬೆನ್ನುಹುರಿ ನೋವು ಪೀಡಿತರಿಗೆ ಸಂತೋಷದ ಸಂಗತಿಯನ್ನು ಅಮೆರಿಕ ತಜ್ಞರು ನೀಡಿದ್ದಾರೆ. ಗಾಯಗೊಂಡ ಬೆನ್ನುಹುರಿಯನ್ನು ರಿಪೇರಿ ಮಾಡಿ ಮೊದಲಿನಷ್ಟೆ ಬಲಿಷ್ಠಗೊಳಿಸಬಹುದು ಎನ್ನುವುದು ಸಂಶೋಧಕರ ವಾದ. ವಂಶವಾಹಿಗಳನ್ನು ಬಳಸಿ ಹೊಸ ಜೀವಕೋಶಗಳನ್ನು ಸೃಷ್ಟಿಸಿ ನರರೋಗಕ್ಕೆ ಪರಿಣಾಮಕಾರಿ ಚಿಕಿತ್ಸೆ ನೀಡಬಹುದು ಎನ್ನುವುದು ಅವರ ಅಭಿಮತ.

ಚಿಕಿತ್ಸೆಯ ಈ ಕ್ರಮದಿಂದ ಬೆನ್ನುಹುರಿ ನೋವು ಸೇರಿದಂತೆ ನರಕೋಶದ ಯಾವುದೇ ಸಮಸ್ಯೆಯನ್ನು ಗುಣಪಡಿಸಲು ಸಾಧ್ಯ ಎನ್ನುವುದು ಅವರ ಅಭಿಪ್ರಾಯ. ಇದು ನರಶಾಸ್ತ್ರದ ಹೊಸ ಅಧ್ಯಯನಕ್ಕೂ ಹಲವು ಅವಕಾಶವನ್ನು ಕಲ್ಪಿಸಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

ಸಂಶೋಧಕರು ಹೇಳುವ ಪ್ರಕಾರ ನರಮಂಡಲದ ಜೀವಕೋಶಗಳು ಸಂದೇಶ ರವಾನಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತವೆ. ಇದನ್ನೇ ಆಧಾರವಾಗಿಟ್ಟುಕೊಂಡು ಜೀವಕೋಶಗಳನ್ನು ಮರುಸೃಷ್ಟಿಸುವ ಮೂಲಕ ತೊಂದರೆಗೆ ಒಳಗಾದ ನರಕೋಶವನ್ನು ದುರಸ್ತಿ ಮಾಡುವ ಕಲೆಯನ್ನು ರೂಢಿಸಿಕೊಂಡಿದ್ದಾರೆ.

## ಮಕ್ಕಳನ್ನು ಬೆದರಿಸಿ ಬೆಳೆಸಬೇಡಿ!

ಪೋಷಕರೇ ನಿಮ್ಮ ಮಕ್ಕಳ ಹಟವನ್ನು ತಾಳದೆ ನಿರಂತರವಾಗಿ ಬೆದರಿಕೆ ಹಾಕಿ, ಭೀತಿ ಹುಟ್ಟಿಸಿ ಸುಮ್ಮನಾಗಿಸುತ್ತಿದ್ದರೆ ಸ್ವಲ್ಪ ಎಚ್ಚರ ವಹಿಸುವುದು ಅವಶ್ಯ ಎಂದು ಅಮೆರಿಕಾದ ಇತ್ತೀಚಿನ ಅಧ್ಯಯನವೊಂದು ಹೇಳಿದೆ. ಬಾಲ್ಯದಲ್ಲಿ ಹಾಕುವ ಬೆದರಿಕೆ ಅವರು ದೊಡ್ಡವರಾದ ಮೇಲೂ ಹಾಗೆಯೇ ಉಳಿಯುತ್ತದೆ. ನಂತರ ಅವರು ಸಹಜವಾಗಿ ಮಾನಸಿಕ ಹಾಗೂ ನೈತಿಕವಾಗಿ ತಮ್ಮ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾರೆ. ಕ್ರಮೇಣ ಅವರಲ್ಲಿ ಧೂಮಪಾನ ಹಾಗೂ ಮದ್ಯಪಾನದ ಬಯಕೆ ಹುಟ್ಟುತ್ತದೆ. ಅಂದರೆ ಅವರ ಮಾನಸಿಕ ಆರೋಗ್ಯದಲ್ಲಿ ಆಗಿರುವ ತೊಂದರೆಯೇ ಇದಕ್ಕೆ ಕಾರಣ ಎಂದು ಆ ಅಧ್ಯಯನ ಸ್ಪಷ್ಟಪಡಿಸಿದೆ.

ಬಾಲ್ಯದಲ್ಲಿ ತೀವ್ರ ಭಯವನ್ನು ಎದುರಿಸಿದವರನ್ನು ಅಧ್ಯಯನಕ್ಕೆ ಒಳಪಡಿಸಿದ ಹೂಸ್ಟನ್ ವಿಶ್ವವಿದ್ಯಾಲಯದ ಅಪರಾಧ ವಿಭಾಗದ ಸಂಶೋಧಕರ ತಂಡ, ಚಿಕ್ಕ ವಯಸ್ಸಿನಲ್ಲಿ ಯಾರು ಹೆಚ್ಚು ಮಾನಸಿಕ ಒತ್ತಡಕ್ಕೆ ಒಳಗಾಗಿರುತ್ತಾರೋ ಅವರಲ್ಲಿ ಅತಿಯಾದ ಮಾನಸಿಕ ಅಸಮತೋಲನ ಕಾಣಿಸಿಕೊಳ್ಳುತ್ತದೆ ಎಂಬ ಅಂಶವನ್ನು ಗುರುತಿಸಿದೆ.

ಭಯದಲ್ಲಿ ಬದುಕುವ ಮಗು ತನ್ನ ಬಾಲ್ಯದಲ್ಲೇ ಅದರ ದುಷ್ಪರಿಣಾಮವನ್ನು ಎದುರಿಸುತ್ತದೆ. ಅದು ಶಾಲೆಯ ದೈನಂದಿನ ಚಟುವಟಿಕೆಯನ್ನೂ ಸಮರ್ಪಕವಾಗಿ ನಿರ್ವಹಿಸುವುದಿಲ್ಲ. ದೊಡ್ಡದಾಗಿ ಬೆಳೆದಂತೆ ಅದರ ಮನಸ್ಸಿನಲ್ಲಿ ಋಣಾತ್ಮಕ ವಿಷಯಗಳೇ ಹೆಚ್ಚು ಕಾಡುತ್ತವೆ. ಹಾಗೆಯೇ ಸಹಜ ನಡವಳಿಕೆ ಮರೆಯಾಗಿ ನಿರಂತರ ತಪ್ಪಿತಸ್ಥ ಭಾವ ಮೂಡುತ್ತಿರುತ್ತದೆ. ಆದ್ದರಿಂದ ಮಕ್ಕಳನ್ನು ತೀರಾ ಭಯದ ವಾತಾವರಣದಲ್ಲಿ ಬೆಳೆಸಬೇಡಿ ಎಂದು ಅವರು ಸಲಹೆ ನೀಡಿದ್ದಾರೆ.

## ಕ್ಯಾನ್ಸರ್ ಪತ್ತೆ ಸುಲಭ!

ಭಯಾನಕ ಕ್ಯಾನ್ಸರ್‌ಗೆ ನಾನಾ ರೂಪ. ಅದು ಆರಂಭಿಕ ಹಂತದಲ್ಲಿದ್ದರೆ, ಗುಣಪಡಿಸಬಹುದು. ಆದರೆ ಅದರ ಇರುವಿಕೆ ಪತ್ತೆ ಹಚ್ಚುವುದೇ ದೊಡ್ಡ ಸವಾಲು. ಇಂತಹ ಸವಾಲನ್ನೇ ಕೈಗೆತ್ತಿಕೊಂಡ ಸಂಶೋಧಕರ ತಂಡವೊಂದು ಪುಟ್ಟ ಉಪಕರಣವನ್ನು ಆವಿಷ್ಕರಿಸುವ ಮೂಲಕ ಸವಾಲಿಗೊಂದು 'ಜವಾಬು' ನೀಡಿದೆ. ಈ ಯಂತ್ರದ ಸಹಾಯದಿಂದ ಕೇವಲ 20 ನಿಮಿಷಗಳಲ್ಲಿ ಯಾವುದೇ ರೀತಿಯ ಕ್ಯಾನ್ಸರನ್ನು ಪತ್ತೆ ಹಚ್ಚಬಹುದು.

ಇದನ್ನು ಈಗಾಲೇ ಇಂಗ್ಲೆಂಡ್‌ನಲ್ಲಿ ಬಳಸಲಾಗುತ್ತಿದೆ. ಜಗತ್ತಿನಾದ್ಯಂತ 120 ಲಕ್ಷ ಜನರಲ್ಲಿ ಕ್ಯಾನ್ಸರ್ ಇರುವುದು ಇದರಿಂದ ಬೆಳಕಿಗೆ ಬಂದಿದೆ. ರೋಗದ ಲಕ್ಷಣವನ್ನು ಸುಲಭವಾಗಿ ಕಂಡು ಹಿಡಿಯುವ ಈ ಯಂತ್ರ, ಚಿಕಿತ್ಸೆಯನ್ನು ಸುಲಭ ಮಾಡುತ್ತದೆ ಎನ್ನುವುದು ಸಂಶೋಧಕರ ಅನಿಸಿಕೆ.

-ಟಿಪ್ಸ್





### ತಾತ್ಕಾಲಿಕ ಆಕರ್ಷಣೆ

ಸುಧಾ ನ.1ರ ಮುಖಪುಟ ಲೇಖನ 'ಡಾನ್ಸ್ ಬೇಬಿ ಡಾನ್ಸ್'ದಲ್ಲಿ ಲೇಖಕಿ ಉಮಾ ಅನಂತ್ ಅಭಿಪ್ರಾಯ ಪಟ್ಟಿರುವಂತೆ ಮಿಶ್ರ ನೃತ್ಯವು ಆಕರ್ಷಣೆ ಉಂಟು ಮಾಡಿ ಬದಲಾವಣೆಗೆ ನಾಂದಿ ಹಾಡಿದರೂ, ಶುದ್ಧ ನೃತ್ಯ ಪ್ರಕಾರ ಫೀನಿಕ್ಸ್ ಹಕ್ಕಿಯಂತೆ ಮತ್ತೆ ಎದ್ದು ಬರುವುದು ಖಂಡಿತ.

-ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### ಜಾಹೀರಾತು ಅತಿಯಾಗಿಲ್ಲ

'ಸುಧಾ' ಪತ್ರಿಕೆಯಲ್ಲಿ ಅತಿಯಾದ ಜಾಹೀರಾತು ಪ್ರಕಟವಾಗಿದೆ ಎಂದು ನ.1ರ ಸಂಚಿಕೆಯಲ್ಲಿ ಈಶ್ವರ್ ಎಂಬವರು ಬರೆದಿರುವ ಪತ್ರ ಓದಿದೆ. ನನಗೇನೂ ಹಾಗೆನಿಸಲಿಲ್ಲ. ಒಟ್ಟು 80 ಪುಟಗಳಲ್ಲಿ 21ಪುಟ ಜಾಹೀರಾತು ಇತ್ತು. ಇದೇನೂ ಜಾಸ್ತಿ ಅಲ್ಲ. ನಾನು ಪುಸ್ತಕ ಪ್ರಕಟಿಸಲು ಹೊರಟಾಗ ಮುದ್ರಣ ಎಷ್ಟು ಕಷ್ಟದ್ದು ಹಾಗೂ ಖರ್ಚುದಾಯಕ ಎಂದು ನನಗೆ ಅರ್ಥವಾಗಿದೆ. ಎಳೆಯರ ಅಂಗಳ, ಜಾಣರ ಪೆಟ್ಟಿಗೆ, ಸುಖೀಭವ, ಫ್ಯಾಷನ್, ಆರೋಗ್ಯ ಹಾಗೂ ಸಿನಿಮಾದ ಕುರಿತ ಲೇಖನಗಳನ್ನು ಪರಿಶೀಲಿಸಿದಾಗ ಗುಣಮಟ್ಟಕ್ಕೆ 'ಸುಧಾ' ವಹಿಸುವ ಕಾಳಜಿ ಅರ್ಥವಾಯಿತು.

-ರಾಜೇಂದ್ರ ಹೆಗಡೆ, ಹಾವೇರಿ

### ಮಲ ಶುಚಿತ್ವದ ಅಚ್ಚರಿ

ಗಣೇಶ ಕಾಳೀಸರ ಅವರ ಚಿತ್ರಲೇಖನ 'ಕರಿಮುಡಿ'ಯ ಬಾಣಂತನ ನೀಡಿದ ಮಲ ಶುಚಿತ್ವದ ಪಾಠ ಒಂದು ಅಚ್ಚರಿ!

-ಡಾ.ಜಿ.ಕೃಷ್ಣಪ್ಪ, ಬೆಂಗಳೂರು

### ಸಚಿತ್ರ ಬರಹ

ಫಾರ್ಮುಲಾ ಒನ್ ಕ್ರೀಡಾ ಪಂದ್ಯದ ಕುರಿತು ಓಂಕಾರಮೂರ್ತಿಯವರ ಸಚಿತ್ರ ಲೇಖನ ಸಕಾಲಿಕವಾಗಿದೆ.

-ಪಿ.ಎನ್.ಶ್ರೀವತ್ಸ, ಬೆಂಗಳೂರು

### ಕಲಾವಿದೆಯ ಒಳನೋಟ

'ನಟಿಯರು ಪ್ರೇಕ್ಷಕರನ್ನು ನೋಡಬಾರದು!' ಆರ್.ನಾಗರತ್ನಮ್ಮನವರ ಕುರಿತ ಗುಡಿಹಳ್ಳಿ ನಾಗರಾಜರ ಲೇಖನ ಕಲಾವಿದೆಯರ ಬದುಕಿನ ಒಳನೋಟ ನೀಡಿದೆ.

-ಎಸ್.ನಿತ್ಯ, ಮೂಡಬಿದಿರೆ/ ನೆ.ಲ.ರಾಂ, ಬೆಂಗಳೂರು/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ತರಂಗಿಣಿ, ತುಮಕೂರು

### ನಿರ್ಲಕ್ಷ್ಯ ಸಮಂಜಸವಲ್ಲ

ರಂಗ ಕಲಾವಿದೆ ಆರ್. ನಾಗರತ್ನಮ್ಮ ನಿಧನರಾದದ್ದು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಲಿಲ್ಲ! ವಿಸ್ತೃತ ಲೇಖನ ನಿರೀಕ್ಷಿಸಿದ್ದ ನಮಗೆ ನಿರಾಶೆ ಆಯಿತು. ಚಿತ್ರ ನಟಿಯರ ಕುರಿತು ಭಾರೀ ವರದಿ ಮಾಡುವವರು ಹಿರಿಯ ಕಲಾವಿದೆಯ ಬಗ್ಗೆ ಈ ರೀತಿ ನಿರ್ಲಕ್ಷ್ಯ ಸಮಂಜಸವಲ್ಲ.

-ದೀಪಕ್, ಕಂಬದಕೋಣೆ/ ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

### ದಲಿತ ಕರುಳಿನ ಅನಾವರಣ

ಸಿ.ಟಿ.ಶಾಂತರಾಜ್‌ರ 'ಕೆಂಜಿಗನೂ ಅವನ ಕರುಳ ಕೆಟ್ಟ ಹಸಿವೂ' ಕಥೆ ದಲಿತರ ದಾರುಣ ಬದುಕನ್ನು ಅನಾವರಣಗೊಳಿಸಿದೆ. ಚಿತ್ರಸೋಮರ ಚಿತ್ರ ಕಥೆಗೆ ಪೂರಕವಾಗಿದೆ.

-ಕೊಹಿಮ, ಬಸರಕೋಡು

### ಚಾರಣದ ವಿಶೇಷ

ಬೈಲೂರಿನ ಬೆಟ್ಟದ ಚಾರಣ ವಿಶಿಷ್ಟವಾಗಿ ಮೂಡಿಬಂದಿದೆ.

-ಡಾ.ಕೆ.ವಿ.ಸಂತೋಷ್, ಹೊಳಲ್ಕೆರೆ

### ಸಕಾಲಿಕ ವಿಚಾರ

ಕೀರ್ತಿ ಶನಿಯ ಬಗ್ಗೆ ವೈನತೇಯರ ವಿಚಾರ ಲಹರಿ ಸಕಾಲಿಕವಾಗಿದೆ.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ರಾಜ್ಯಮಟ್ಟದ ಛಾಯಾಚಿತ್ರ ಸ್ಪರ್ಧೆ

ಸಾಗರ ಫೋಟೊಗ್ರಾಫಿಕ್ ಸೊಸೈಟಿಯು 35 ವರ್ಷದ ಒಳಗಿನವರಿಗಾಗಿ ಛಾಯಾಚಿತ್ರ ಸ್ಪರ್ಧೆ ಏರ್ಪಡಿಸಿದೆ. 'ಗ್ರಾಮೀಣ ಬದುಕು' ಮತ್ತು 'ಕ್ಯಾಂಡಿಡ್ ಕ್ಷಣ' ಎಂಬ ಎರಡು ವಿಷಯದ ಕುರಿತು 8'– 12' ಅಳತೆಯ ತಲಾ 4 ಛಾಯಾಚಿತ್ರಗಳನ್ನು ಡಿ. 12ರ ಒಳಗಾಗಿ ಕೆ. ಚಂದ್ರಶೇಖರ್, ಕಾರ್ಯದರ್ಶಿ, ಸಾಗರ ಫೋಟೊಗ್ರಾಫಿಕ್ ಸೊಸೈಟಿ, ಓಂಕಾರ ನಿಲಯ, ಅಣಲೇಕೊಪ್ಪ, ಸಾಗರ-577401, ಶಿವಮೊಗ್ಗ ಜಿಲ್ಲೆ – ಈ ವಿಳಾಸಕ್ಕೆ ಕಳುಹಿಸಬೇಕು. ಹೆಚ್ಚಿನ ವಿವರಗಳಿಗೆ: 9480280977 08183-229243. ಇ ಮೇಲ್: aglnarayan@gmail.com;